## ಸಂಚಾರಿ ಪಥದಲ್ಲಿ ವಿಜಯ್

ಸಂಚಾರಿ ವಿಜಯ್ ಈಗ '6ನೇ ಮೈಲಿ'ಯಲ್ಲಿ ನಿಂತಿದ್ದಾರೆ. ಇದು ಸಿನಿಮಾದ ಹೆಸರು. ಚಿತ್ರದ ಶೀರ್ಷಿಕೆಯೇ ಕಥೆಯಲ್ಲಿ ಪಯಣದ ಅಂಶ ಇರುವುದನ್ನೂ ಸೂಚಿಸುವಂತಿದೆ. ಸೀನಿ ಈ ಚಿತ್ರದ ನಿರ್ದೇಶಕರು.

ಕಳೆದ ವಾರ ನಡೆದ ಸಿನಿಮಾದ ಮುಹೂರ್ತ ಸಾಕಷ್ಟು ಅದ್ದೂರಿಯಾಗಿತ್ತು. ಸಿನಿಮಾಕ್ಕೆ ಚಾಲನೆ ನೀಡಿದ ಮತ್ತೊಬ್ಬ ಯುವ ನಿರ್ದೇಶಕ 'ಸಿಂಪಲ್ ಸುನಿ' – '6ನೇ ಮೈಲಿ' ಯಶಸ್ಸು ಕಾಣಲಿ, ನೂರು ದಿನಗಳ ಪ್ರದರ್ಶನ ಕಾಣಲಿ ಎಂದು ಆಶಿಸಿದರು. ಅಂದಹಾಗೆ, ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥೆಯಂತೆ. ನಾಲ್ವರು ಸ್ನೇಹಿತರು ಚಾರಣಕ್ಕೆ ಹೋದ ಸಂದರ್ಭದಲ್ಲಿ ನಡೆಯುವ ಘಟನೆಗಳೇ ಚಿತ್ರದ ಹೂರಣ. '6ನೇ ಮೈಲಿ ಎನ್ನುವುದು ಸ್ಥಳವೊಂದರ ಹೆಸರು. ಚಾರಣಕ್ಕೆ ಹೋದವರು ಮನೆಗೆ ಮರಳುತ್ತಾರಾ ಇಲ್ಲವಾ ಎನ್ನುವುದು ಚಿತ್ರದ ಕುತೂಹಲಕರ ಅಂಶ' ಎನ್ನುವುದು ವಿಜಯ್ ಬಣ್ಣನೆ.

ಚಿತ್ರದ ಮುಹೂರ್ತದ ಜೊತೆಗೆ ಕಳೆದ ವಾರ ವಿಜಯ್ ನಟನೆಯ ಮತ್ತೊಂದು ಸಿನಿಮಾ ಕೂಡ ಸುದ್ದಿಯಲ್ಲಿತ್ತು. ಅದು 'ಕೃಷ್ಣ ತುಳಸಿ' ಸಿನಿಮಾದ ಟ್ರೈಲರ್ ಬಿಡುಗಡೆಯ ಸಂಭ್ರಮ. ಸುಕೇಶ್ ನಾಯಕ್ ನಿರ್ದೇಶನದ ಈ ಸಿನಿಮಾ ಈಗಾಗಲೇ ಶೇ. 85ರಷ್ಟು ಚಿತ್ರೀಕರಣ ನಡೆಸಿದೆ. ಮೈಸೂರಿನಲ್ಲಿ ನಡೆಯುವ ಪ್ರೇಮಕಥನ ಈ ಚಿತ್ರದಲ್ಲಿದೆಯಂತೆ. ಮೇ ತಿಂಗಳಲ್ಲಿ ಚಿತ್ರವನ್ನು ತೆರೆಕಾಣಿಸುವ ಪ್ರಯತ್ನ ಸುಕೇಶ್ ಅವರದು.

ವಿಜಯ್ ಕುರುಡನ ಪಾತ್ರದಲ್ಲಿ ನಟಿಸಿರುವುದು 'ಕೃಷ್ಣ ತುಳಸಿ' ಚಿತ್ರದ ವಿಶೇಷಗಳಲ್ಲೊಂದು. ಸವಾಲಿನ ಪಾತ್ರಗಳಿಗೆ ಸದಾ ಹುರುಪು ತೋರುವ ವಿಜಯ್ ಅವರಿಗೆ ಸುಕೇಶ್ ರೂಪಿಸಿರುವ ಪಾತ್ರದ ನಿರ್ವಹಣೆ ಖುಷಿ ಕೊಟ್ಟಿದೆ. ಸುಚೇಂದ್ರ ಪ್ರಸಾದ್, ಕುರಿ ಪ್ರತಾಪ್ ಹಾಗೂ ತಬಲಾ ನಾಣಿ ತಾರಾಗಣದಲ್ಲಿರುವ ಪ್ರಮುಖರು.





## ಚಿನ್ನದ ಹುಡುಕಾಟದಲ್ಲಿ ಯೋಗಿ

ಯೋಗಿ ನಟನೆಯ 'ಕೋಲಾರ' ನೈಜ ಘಟನೆಗಳನ್ನು ಆಧರಿಸಿದ ಸಿನಿಮಾ ಎನ್ನುವ ಕಾರಣಕ್ಕಾಗಿ ಗಾಂಧಿನಗರದ ಗಮನಸೆಳೆದಿರುವ ಸಿನಿಮಾ. ಇತ್ತೀಚೆಗಷ್ಟೇ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಯಾಗಿರುವುದು, ಚಿತ್ರವನ್ನು ತೆರೆ ಕಾಣಿಸುವ ಪ್ರಯತ್ನಗಳು ನಡೆಯುತ್ತಿವೆ.

ರೌಡಿಸಂ ಕಥನಗಳನ್ನು ಆಧರಿಸಿದ ಕನ್ನಡ ಸಿನಿಮಾಗಳ ದೊಡ್ಡದೊಂದು ಪಟ್ಟಿಯೇ ಇದೆ. ಈ ಪಟ್ಟಿಯಲ್ಲಿ ವಿಶೇಷವಾಗಿ ಕಾಣಿಸುವುದು ರಿಯಲ್ ರೌಡಿಗಳ ಬದುಕನ್ನು ಆಧರಿಸಿ ರೂಪುಗೊಂಡ ಸಿನಿಮಾಗಳು. ಈ ಸಾಲಿಗೆ 'ಕೋಲಾರ' ಕೂಡ ಸೇರುತ್ತಿದೆ. ತೊಂಬತ್ತರ ದಶಕದಲ್ಲಿ ಕೆಜಿಎಫ್‌ನಲ್ಲಿ ತಲ್ಲಣ ಮೂಡಿಸಿದ್ದ ತಂಗಂ ಎನ್ನುವ ಕುಖ್ಯಾತ ವ್ಯಕ್ತಿಯ ಕಥೆಯನ್ನು ಈ ಚಿತ್ರ ಹೊಂದಿದೆ. 'ಚಿನ್ನದ ನೆಲದಲ್ಲಿ ರಕ್ತದ ಓಕುಳಿ' ಎನ್ನುವುದು ಶೀರ್ಷಿಕೆಯ ಅಡಿಟಿಪ್ಪಣಿ.

ಆರ್ಯ ಮಹೇಶ್ ಚಿತ್ರದ ನಿರ್ದೇಶಕರು. ತಂಗಂ ಬದುಕಿನ ಕೆಲವು ಪ್ರಸಂಗಗಳನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸಿರುವುದನ್ನು ಉತ್ಸಾಹದಿಂದಲೇ ಹೇಳಿಕೊಳ್ಳುವ ಮಹೇಶ್, ತಂಗ ಜೊತೆಗೆ ಆತನ ಸಹೋದರನ ಕಥೆಯನ್ನೂ ಸಿನಿಮಾದಲ್ಲಿ ಅಳವಡಿಸಿದ್ದಾರಂತೆ. 'ತಮ್ಮ ಚಿತ್ರದ ಪ್ರತಿ ಪಾತ್ರಕ್ಕೂ ಹೀರೊ ವರ್ಚಸ್ಸಿದೆ' ಎನ್ನುವುದು ಅವರ ಬಣ್ಣನೆ.

ಪಾತ್ರಕ್ಕಾಗಿ ತಿಂಗಳುಗಳ ಕಾಲ ಗಡ್ಡ–ಮೀಸೆ ಬೋಳಿಸಿಕೊಳ್ಳದೆ ಪರದಾಡಿರುವ ನಟ ಯೋಗಿಗೆ, ನೈಜ ಘಟನೆ ಆಧರಿಸಿದ ಚಿತ್ರದಲ್ಲಿ ನಟಿಸಿರುವುದು ಸವಾಲೆನ್ನಿಸಿದೆ. ಪಾತ್ರಕ್ಕಾಗಿ ಅವರು ತಮ್ಮ ತೂಕವನ್ನು ಕೂಡ ಸ್ವಲ್ಪಮಟ್ಟಿಗೆ ಹೆಚ್ಚಿಸಿಕೊಂಡಿದ್ದಾರೆ. ನೈನಾ ಚಿತ್ರದ ನಾಯಕಿ.

■ ರಘು